

‘ವಿಲೇಜ್ ಕುಕ್ಕಿಂಗ್’ ಚಾನಲ್ ಖ್ಯಾತಿಯ ಪೆರಿಯತಂಬಿ ಬಳಗ

ಕೆಲಸ ಸಿಗುತ್ತಿಲ್ಲ ಎನ್ನುತ್ತಿದ್ದರು. ಅಂಥವರನ್ನೆಲ್ಲ ಸೇರಿಸಿಕೊಂಡು ಒಂದು ತಂಡ ಕಟ್ಟಿಕೊಂಡೆ. ಅವರಿಗೆ ಯೂಟ್ಯೂಬ್ ವಿಡಿಯೊಗಳಿಗೆಂದೇ ಅಗತ್ಯ ತರಬೇತಿ ಕೊಟ್ಟೆ. ಈಗ ಹತ್ತು ಜನ ಈ ವಿಡಿಯೊಗಳನ್ನು ಸಿದ್ಧಪಡಿಸಿ, ಎಡಿಟ್ ಮಾಡಿ, ಅಪ್‌ಲೋಡ್ ಮಾಡುವುದಲ್ಲದೆ ಅವನ್ನು ಹೆಚ್ಚು ಜನರು ನೋಡಲು ಏನೆಲ್ಲ ತಾಂತ್ರಿಕ ಜಾಣ್ಮೆ ತೋರಬೇಕು ಎನ್ನುವುದನ್ನು ಕಲಿತಿದ್ದಾರೆ. ನಮ್ಮ ಸಾಂಘಿಕ ಪ್ರಯತ್ನದಿಂದ ಇದೊಂದು ಸಣ್ಣ ಉದ್ಯಮವಾಗಿ ಬೆಳೆಯಲು ಸಾಧ್ಯವಾಗಿದೆ.’

ಹೆಬ್ಬಾರ್ಸ್ ಕಿಚನ್ ಯೂಟ್ಯೂಬ್ ಚಾನೆಲ್‌ನಲ್ಲಿ ತರಹೇವಾರಿ ಖಾದ್ಯಗಳಿವೆ. ಧ್ವನಿಯೇ ಇಲ್ಲದ ಮೂರ್ನಾಲ್ಕು ನಿಮಿಷದ ವಿಡಿಯೊಗಳು ಒಂದು ಬಗೆಯವು. ಮಾತಿನ ಲೇಪ ಇರುವ ವಿಡಿಯೊಗಳು ಇನ್ನೊಂದು ಬಗೆಯವು. ಇವಲ್ಲದೆ ಪಶ್ಚಿಮ ಘಟ್ಟದ ಹಳ್ಳಿ ರೀತಿಯ ಪ್ರಕೃತಿಯ ಮಡಿಲಲ್ಲಿ ಒಲೆ ಹೊತ್ತಿಸಿ, ಅಡುಗೆ ಮಾಡುವ ವಿಡಿಯೊಗಳನ್ನೂ ಅವರ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ. ಐದಾರು ನಿಮಿಷಗಳ ಅವಧಿಯ ಈ ವಿಡಿಯೊಗಳಿಗೆ ಹೆಚ್ಚು ಜನ ಆಕರ್ಷಿತರಾಗುತ್ತಿದ್ದಾರೆ. ಆಹಾರವೆಂದರೆ ಅದು ಸಂಸ್ಕೃತಿಯ ಭಾಗವೂ ಹೌದು ಎನ್ನುವುದಕ್ಕೆ ಇದೇ ಸಾಕ್ಷಿ. ಪಶ್ಚಿಮ ಘಟ್ಟದ ರಮ್ಯ ತಾಣಗಳನ್ನೂ ಕಣ್ತುಂಬಿಕೊಂಡು, ಇಷ್ಟದ ತಿನಿಸುಗಳನ್ನು ಮಾಡುವ ಕಲೆಯನ್ನೂ ಕರಗತ ಮಾಡಿಕೊಳ್ಳುವ ಅವಕಾಶ ವೀಕ್ಷಕರಿಗೆ ಸಿಗುತ್ತಿದೆ. ‘ರೆಸಿಪಿ ಎಂಟರ್‌ಟೇನ್‌ಮೆಂಟ್ ಚಾನೆಲ್’ ಎನ್ನುವ ಗುಣವನ್ನೂ ಅರ್ಚನಾ ಹಾಗೂ ಸುದರ್ಶನ್ ಇದಕ್ಕೆ ದಕ್ಕಿಸಿಕೊಟ್ಟಿದ್ದಾರೆ. ಹತ್ತು ನಿಮಿಷ ಅಥವಾ ಅದಕ್ಕಿಂತ ಹೆಚ್ಚು ಅವಧಿಯ ವಿಡಿಯೊಗಳು ಇಂಥ ಪ್ರಕಾರಕ್ಕೆ ಉದಾಹರಣೆಗಳು.

‘ಒಂದು ವರ್ಷ ಕನ್ನಡದಲ್ಲೇ ವಿಡಿಯೊಗಳನ್ನು ಮಾಡಿದೆವು. ಆದರೆ, ಹೆಚ್ಚು ವೀಕ್ಷಕರನ್ನು ಸೃಷ್ಟಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮಾತೇ ಇಲ್ಲದ ಇಂಗ್ಲಿಷ್‌ನಲ್ಲಿ ವಿವರಣೆಯ ಸಾಲುಗಳು ಮೂಡಿರುವ ವಿಡಿಯೊಗಳು ಹೆಚ್ಚು ಜನಪ್ರಿಯವಾದವು. ಕಾಲಕ್ರಮೇಣ ಹಿಂದಿಯಲ್ಲೂ ವಿಡಿಯೊಗಳನ್ನು ಹಾಕತೊಡಗಿದೆವು. ಇವಕ್ಕೆ ದೇಶದ ಉದ್ದಗಲದಿಂದಲೂ ಉತ್ತಮ ಪ್ರತಿಕ್ರಿಯೆ ಬರಲಾರಂಭಿಸಿತು’ ಎನ್ನುತ್ತಾರೆ ಸುದರ್ಶನ್.

YouTube ಸ್ಟಾರ್ಸ್

# 75ರ ಅಜ್ಜ 107ರ ಅಜ್ಜಿ



‘ಕಂಟ್ರಿ ಫುಡ್ಸ್’ ಖ್ಯಾತಿಯ 107 ವರ್ಷದ ಗುಂಟೂರಿನ ಮಸ್ತಾನಮ್ಮ

ರಾಹುಲ್ ಗಾಂಧಿ ‘Kalan Biriyani’ ಅರ್ಥಾತ್ ಅಣಬೆ ಬಿರಿಯಾನಿ ಮಾಡಿದ್ದನ್ನು ಎರಡು ದಿನಗಳಲ್ಲಿ 90 ಲಕ್ಷ ಜನ ವೀಕ್ಷಿಸಿದ್ದು ಈ ಹಿಂದೆ ಸುದ್ದಿಯಾಗಿತ್ತು. ‘Village Cooking Channel’ನಲ್ಲಿ ಅವರು ಈ ಖಾದ್ಯ ತಯಾರಿಸಿದ್ದರು. ತಮಿಳುನಾಡಿನ ಈ ಆಹಾರದ ಯೂಟ್ಯೂಬ್ ಚಾನೆಲ್ ಚಂದಾದಾರರ ಸಂಖ್ಯೆ ಇದೇ ವರ್ಷದ ನಡುಘಟ್ಟದಲ್ಲಿ ಒಂದು ಕೋಟಿ ದಾಟಿತು. 2018ರಲ್ಲಿ 75 ವರ್ಷ ವಯಸ್ಸಿನ ಪೆರಿಯತಂಬಿ ಎಂಬ ಬಾಣಸಿಗ ಪ್ರಾರಂಭಿಸಿದ ಚಾನೆಲ್ ಇದು. ಅವರು, ಅವರ ಮಕ್ಕಳು–ಮೊಮ್ಮಕ್ಕಳೆಲ್ಲ ಸೇರಿ ಅಡುಗೆ ಮಾಡುವ ವಿಡಿಯೊಗಳನ್ನು ಅಪ್‌ಲೋಡ್ ಮಾಡತೊಡಗಿದರು. ಕೃಷಿಭೂಮಿಯ ಹಸಿರು ಪರಿಸರದಲ್ಲಿ ಆಹಾರ ಮಾಡುವುದನ್ನು ತೋರುವ ಈ ದೇಸಿ ವಿಡಿಯೊಗಳು ನೋಡನೋಡುತ್ತಲೇ ವೈರಲ್ ಆದವು. ಲಿವರ್ ಬಿರಿಯಾನಿ, ಪಾನಿಪೂರಿ, ಗುಲಾಬ್ ಜಾಮೂನು ಹೀಗೆ ಅವರು ತಯಾರಿಸಿದ ತಿನಿಸುಗಳ ವೈವಿಧ್ಯವೂ ಮೆಚ್ಚುಗೆ ಗಳಿಸಿತು. ಒಂದು ಮೂಲದ ಪ್ರಕಾರ ತಿಂಗಳಿಗೆ ಈ ಚಾನೆಲ್ 7 ಲಕ್ಷ ರೂಪಾಯಿ ಆದಾಯ ಗಳಿಸುತ್ತಿದೆ. ರಾಶಿ ರಾಶಿ ಅಡುಗೆ ಮಾಡುವ ವಿಡಿಯೊಗಳನ್ನು ಜನ ನೋಡಿದ ಮೇಲೆ ಮುಖ್ಯವಾದ ಪ್ರಶ್ನೆಯನ್ನೂ ಮುಂದಿಟ್ಟಿದ್ದರು – ಈ ಖಾದ್ಯಗಳನ್ನು ತಿನ್ನುವವರು ಯಾರು? ಮೊದ ಮೊದಲು ಸುತ್ತಮುತ್ತಲಿನ ಮನೆಯವರ ಜತೆ ಹಂಚಿಕೊಳ್ಳುತ್ತಿದ್ದ ಪೆರಿಯತಂಬಿ, ಕೋವಿಡ್ ಕಾಲದಲ್ಲಿ ಹಸಿದುಕೊಂಡಿದ್ದವರಿಗೆ ಸಹಾಯದ ರೂಪದಲ್ಲಿ ಉಣಬಡಿಸಿದರು.

ಆಂಧ್ರಪ್ರದೇಶದ ಗುಂಟೂರಿನ ಮಸ್ತಾನಮ್ಮ ಎನ್ನುವ 107 ವರ್ಷದ ಅಜ್ಜಿ 2018ರಲ್ಲಿ ತೀರಿಹೋದರು. ಅದಕ್ಕೂ ಎರಡು ವರ್ಷಗಳ ಹಿಂದೆ ಅವರು ಸಾಂಪ್ರದಾಯಿಕ ತಿನಿಸುಗಳನ್ನು ಮಾಡಿ ತೋರಿಸುವ ‘Country foods’ ಯೂಟ್ಯೂಬ್ ಚಾನೆಲ್ ಮಾಡಿದ್ದರು. 12 ಲಕ್ಷ ಚಂದಾದಾರರು ಆ ಚಾನೆಲ್‌ಗೆ ಇದ್ದರೆನ್ನುವುದು ವಿಶೇಷ. ಹೈದರಾಬಾದ್ ಮೂಲದ ಮಾಧ್ಯಮಮಿತ್ರರಾದ ಕೆ. ಲಕ್ಷ್ಮಣ್ ಹಾಗೂ ಶ್ರೀನಾಥ್ ರೆಡ್ಡಿ ಎನ್ನುವವರು ಈ ಚಾನೆಲ್ ಅನ್ನು ತಾಂತ್ರಿಕವಾಗಿ ನಿರ್ವಹಿಸುತ್ತಿದ್ದರು. ಬಸವನಹುಳುವಿನ ಕರ್ರಿ, ಕಲ್ಲಂಗಡಿಹಣ್ಣಿನ ಚಿಕನ್, ಹಂದಿಮಾಂಸದ ತರಹೇವಾರಿ ಖಾದ್ಯಗಳನ್ನು ಮಸ್ತಾನಮ್ಮ ತಮ್ಮದೇ ಶೈಲಿಯಲ್ಲಿ ಮಾಡಿ, ಪ್ರಯೋಗಗಳನ್ನೂ ಹಂಚಿಕೊಂಡಿದ್ದರು.